**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಸಕಲೇಶಪುರ**

**C.C.No.**1106/2023

| | | |
|---|---|---|
| **ಹೆಸರುಃ** | **ನಾಗಾರ್ಜುನ** | **CW**-3 |
| **ತಂದೆ/ಗಂಡ ಹೆಸರುಃ** | **ಚಂದ್ರಕುಮಾರ್ ಕೆ ಎಸ್** | **PW**-2 |
| **ವಯಸ್ಸುಃ** | **25 ವರ್ಷ** | |
| **ವೃತ್ತಿಃ** | **ವ್ಯವಸಾಯ** | |
| **ವಿಳಾಸಃ** | **ಯಸಳೂರು** | **ದಿನಾಂಕಃ 20-01-2025** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದ.**

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನನಗೆ ಆರೋಪಿತರ ಪರಿಚಯ ಇರುವುದಿಲ್ಲ. ಚಾಸಾ-1,2 ಮತ್ತು 4 ರವರ ಪರಿಚಯ ಇರುತ್ತದೆ. ದಿಃ 20-07-2023 ರಂದು ನಾನು ಯಸಳೂರಿನಲ್ಲಿ ಇದ್ದಾಗ ಪೋಲೀಸರು ನನ್ನನ್ನು ಸಾಕ್ಷಿಯಾಗಿ ಕರೆದಿರುತ್ತಾರೆ. ಆದರೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಮತ್ತು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ ಸ ಅ ಅವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)***

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದ.**

ದಿಃ 20-07-2023 ರಂದು ಸಂಜೆ 6.30 ರ ಸಮಯದಲ್ಲಿ ನಾನು, ಚಾಸಾ-1, 2 ಮತ್ತು 4 ರವರು ಕೃಷಿ ಯಂತ್ರಗಳನ್ನು ಶಿವಶಂಕರಪ್ಪನವರ ಮನೆಯಿಂದ ತರಲು ಹೋದಾಗ ಆರೋಪಿತರು ಗೇಟಿನ ಹತ್ತಿರ ಬಂದು ಕೆಎ-03-ಎಂಇ-5814 ಕಾರನ್ನು ಅಡ್ಡಗಟ್ಟಿ ಹೊರಗೆ ಹೋಗದಂತೆ ಬೀಗ ಹಾಕಿದಾಗ ಚಾಸಾ-1 ರವರು ಕೇಳಲಾಗಿ ನಮ್ಮನ್ನು ಅವಾಚ್ಯ ಶಬ್ದಗಳಿಂದ ಬೈದು ಊರಿನಲ್ಲಿ ಇರಲು ಬಿಡುವುದಿಲ್ಲ ಎಂದು ಜೀವಬೆದರಿಕೆ ಹಾಕಿರುತ್ತಾರೆ ಎಂದರೆ

ಸರಿಯಲ್ಲ. ನಾನು ಸದರಿ ಗಲಾಟೆಯನ್ನು ಪ್ರತ್ಯಕ್ಷ ನೋಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈಗ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಹೇಳಿಕೆಯನ್ನು ಅಲ್ಲಗಳೆದಿದ್ದರಿಂದ ಹೇಳಿಕೆಯನ್ನು ನಿ.ಪಿ.3 ಎಂದು ಗುರುತಿಸಲಾಯಿತು. ನನಗೆ ಈ ಘಟನೆ ಬಗ್ಗೆ ಮಾಹಿತಿ ಇದ್ದರೂ ಸಹ ಆರೋಪಿತರೊಂದಿಗೆ ರಾಜಿಯಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ**

**ಮರು ವಿಚಾರಣೆಃ ಇಲ್ಲ**

ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೆ ಕೇ ಸ ಇ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ**
**ಸಕಲೇಶಪುರ**